**ಪಾಠ–11** **ಮಾರ್ಚ್ 7–13**

# ಯುದ್ಧದಿಂದ ಗೆಲುವಿನೆಡೆಗೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಎಫೆಸ 6:12, ದಾನಿಯೇಲ 10, ಎಜ್ರ 4:1–5, ಯೋಶೇಯ 5:13–15, ಪ್ರಕ 1:12–18, ಕೊಲಸ್ಸೆ 2:15, ರೋಮಾ 8:37–39.

**ಸ್ಮರಣವಾಕ್ಯ : ದಾನಿಯೇಲನು ಕಡೆಯ ದರ್ಶನವನ್ನು 10ನೇ ಅಧ್ಯಾಯದಲ್ಲಿ ದಾನಿಯೇಲ 10ನೇ ಅಧ್ಯಾಯವು ಮುಕ್ತಾಯದ ದರ್ಶನವನ್ನು ಪರಿಚಯಿಸುತ್ತದೆ. ಇದು 11ನೇ ಮತ್ತು 12ನೇ ಅಧ್ಯಾಯಗಳಲ್ಲಿ ಮುಂದುವರೆದಿದೆ. ಆರಂಭದಲ್ಲಿಯೇ ದರ್ಶನವು ಒಂದು ದೊಡ್ಡ ಹೋರಾಟಕ್ಕೆ ಸಂಬಂಧಿಸಿರುವುದು ನಮಗೆ ತಿಳಿಸಲ್ಪಡುತ್ತದೆ. ಈ ಹೋರಾಟದ ಬಗ್ಗೆ 11ನೇ ಅಧ್ಯಾಯವು ಹೆಚ್ಚಿನ ಮಾಹಿತಿಯನ್ನು ನೀಡುತ್ತದೆ. 10ನೇ ಅಧ್ಯಾಯವು ಇದರ ಆಧ್ಯಾತ್ಮಿಕ ಆಯಾಮವನ್ನು ತೋರುತ್ತದೆ ಭೂಮಿಯ ಮೇಲೆ ನಡೆಯುವ ಹೋರಾಟಗಳು ವಿಶ್ವಮಟ್ಟದ ಆಧ್ಯಾತ್ಮಿಕ ಹೋರಾಟಗಳಾಗಿವೆ. ಈ ಅಧ್ಯಾಯದಲ್ಲಿ ನಾವು ಪ್ರಾರ್ಥನೆ ಮಾಡುವಾಗ ಆಕಾಶಮಂಡಲದಲ್ಲಿ ನಡೆಯುವ ಹೋರಾಟದ ಮೇಲೆ ಮಹತ್ತರ ಪರಿಣಾಮ ಬೀರುವುದನ್ನು ನೋಡುತ್ತೇವೆ. ಆದರೆ ಈ ಹೋರಾಟದಲ್ಲಿ ನಾವು ಏಕಾಂಗಿಗಳಲ್ಲ; ಯೇಸುಕ್ರಿಸ್ತನು ನಮ್ಮ ಪರವಾಗಿ ನಿಂತು ಸೈತಾನನ ವಿರುದ್ಧವಾಗಿ ಯುದ್ಧ ಮಾಡುತ್ತಾನೆ. ನಾವು ಹೋರಾಡುವುದು ಈ ಭೂಮಿಯ ಮೇಲಿರುವ ಸಂಗಡವಲ್ಲ. ಆದರೆ ಆಕಾಶಮಂಡಲದಲ್ಲಿರುವ ಅಂಧಕಾರಶಕ್ತಿಗಳ ಮೇಲೆ ಹೋರಾಡುತ್ತಿರುತ್ತೇವೆ.**

ಇದನ್ನು ಪೌಲನು ದಾನಿಯೇಲನ ತರುವಾಯ ಅನೇಕ ಶತಮಾನಗಳ ನಂತರ ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ ಹೇಳಿರುವುದನ್ನು ಕಾಣುತ್ತೇವೆ. "ನಾವು ಹೋರಾಡುವುದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ (ಎಫೆಸ 6:12). ಕಡೆಯದಾಗಿ ಈ ಹೋರಾಟದಲ್ಲಿ ನಮ್ಮ ಜಯವು ಯೇಸುವಿನ ಮೇಲೆ ಆಧಾರಗೊಂಡಿದೆ. ಆತನು ತಾನೆ ಶಿಲುಬೆಯ ಮೇಲೆ ಸೈತಾನನ್ನು ಸೋಲಿಸಿದನು.

ಈ ಪಾಠವನ್ನು ಮಾರ್ಚ್ 14ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿ.

**ಭಾನುವಾರ** **ಮಾರ್ಚ್ 8**

## ಮತೊಮ್ಮೆ ಪ್ರಾರ್ಥನೆ ಮತ್ತು ಉಪವಾಸ

ಓದಿರಿ : ದಾನಿಯೇಲ 10:1–3, ಇಲ್ಲಿ ದಾನಿಯೇಲನು ಮತ್ತೆ ಏನು ಮಾಡುವುದನ್ನು ನೋಡುತ್ತೇವೆ?

ದಾನಿಯೇಲನು ತನ್ನ ಶೋಕಾವಧಿಯನ್ನು ವಿಸ್ತರಿಸುವುದಕ್ಕೆ ಕಾರಣಗಳನ್ನು ನೀಡಿಲ್ಲ. ಯೆಹೂದ್ಯರ (ಪರಿಸ್ಥಿತಿಯು) ಅವನು ಹಾಗೆ ಹೆಚ್ಚಿನ ಹುರುಪಿನಿಂದ ಮಧ್ಯಸ್ಥಿಕೆಯನ್ನು ವಹಿಸುವುದಕ್ಕೆ ಪ್ರೇರಿಸಿರಬಹುದು, ಯೆಹೂದ್ಯರು ಆಗಷ್ಟೆ ಬ್ಯಾಬಿಲೋನಿನಿಂದ ಪ್ಯಾಲೆಸ್ತೇನಿಗೆ ಹಿಂದಿರುಗಿದ್ದರು.

ಓದಿರಿ : ಎಜ್ರ 4:1–5. ಯೆಹೂದ್ಯರು ಹಿಂದಿರುಗಿ ಸ್ವದೇಶಕ್ಕೆ ಬಂದಾಗ ಅವರು ಯಾವ ಸವಾಲುಗಳನ್ನು ಎದುರಿಸುತ್ತಿದ್ದರು?

ಎಜ್ರ 4:1–5ರಲ್ಲಿ ಇಬ್ರಿಯರು (ಯೆಹೂದ್ಯರು) ದೇವಾಲಯವನ್ನು ತಿರುಗಿ ಕಟ್ಟುವ ಪ್ರಯತ್ನ ಮಾಡಿದಾಗ ಬಲವಾದ ವಿರೋಧವನ್ನು ಈ ಸಂದರ್ಭದಲ್ಲಿ ಎದುರಿಸಿದರು. ಸಮಾರ್ಯರು ರಾಜನಿಗೆ ಸುಳ್ಳು ಪಾರಸಿಯ ಸಂಸ್ಥಾನಕ್ಕೆ ಸುಳ್ಳು ವರದಿ ನೀಡಿ ರಾಜನು ಪುನರ್ ನಿರ್ಮಾಣದ ಕೆಲಸವನ್ನು ನಿಲ್ಲಿಸುವಂತೆ ಪ್ರಚೋದನೆ ಮಾಡಿದರು. ಅಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ರಾಜನಾದ

ಕುರೇಷನಿಗೆ ದೇವರು ಪ್ರಭಾವ ಬೀರುವಂತೆ ದಾನಿಯೇಲನು ಮೂರು ವಾರಗಳ ಕಾಲ ದೇವರಿಗೆ ವಿಜ್ಞಾಪನೆ ಮಾಡಿದನು.

ದಾನಿಯೇಲನ ವಯಸ್ಸು ಆವಾಗ 90 ವರ್ಷಗಳಿಗೆ ಸಮೀಪವಿದ್ದಿರಬಹುದು. ಆತನು ತನ್ನ ಬಗ್ಗೆ ಚಿಂತಿಸಿದೆ ತನ್ನ ಜನರು ಎದುರಿಸುತ್ತಿದ್ದ ಕಷ್ಟಗಳ ಬಗ್ಗೆ ಚಿಂತಿಸುತ್ತಿದ್ದನು. ಆತನು ದೇವರಿಂದ ಉತ್ತರ ಬರುವವರೆಗೆ ನಿರಂತರವಾಗಿ ಮೂರು ವಾರಗಳ ಕಾಲ ಪ್ರಾರ್ಥನೆ ವಿಜ್ಞಾಪನೆಗಳನ್ನು ಮಾಡುತ್ತಿದ್ದನು. ಈ ಅವಧಿಯಲ್ಲಿ ಪ್ರವಾದಿಯು ತಲೆಗೆ ಎಣ್ಣೆಯನ್ನು ಹಚ್ಚಿಕೊಳ್ಳದೆ ತನಗಿಷ್ಟವಾದ ಊಟದ ಪದಾರ್ಥಗಳನ್ನು ಸಹ ತ್ಯಜಿಸಿ ಸರಳವಾದ ಆಹಾರವನ್ನು ಸೇವಿಸುತ್ತಿದ್ದನು. ಆತನು ಸಂಪೂರ್ಣವಾಗಿ ತನ್ನ ಮೇಲಿನ ಕಾಳಜಿಯನ್ನು ಬಿಟ್ಟು ಸಾವಿರ ಮೈಲುಗಳ ಆಚೆ ಯೆರೂಸಲೇಮಿನಲ್ಲಿದ್ದ ತನ್ನ ಜನರ ಒಳಿತಿನ ಬಗ್ಗೆ ಕಾಳಜಿಯುಳ್ಳವನಾಗಿದ್ದನು.

ದಾನಿಯೇಲನ ಪ್ರಾರ್ಥನಾ ಜೀವಿತವನ್ನು ನೋಡುವಾಗ ಕೆಲವು ಅಮೂಲ್ಯವಾದ ಪಾಠಗಳನ್ನು ಕಲಿಯುತ್ತೇವೆ. ಮೊದಲನೆಯದು, ನಮ್ಮ ಪ್ರಾರ್ಥನೆಗೆ ಕೂಡಲೇ ಉತ್ತರ ಸಿಗದಿದ್ದರೂ ನಾವು ಪ್ರಾರ್ಥನೆಯಲ್ಲಿ ನಿರಂತರವಾಗಿ ತೊಡಗಿರಬೇಕು. ಎರಡನೆಯದು ನಾವು ನಮ್ಮ ಸಮಯವನ್ನು ಇತರರಿಗೋಸ್ಕರ ಪ್ರಾರ್ಥನೆ ಮಾಡುವುದಕ್ಕಾಗಿ ಮೀಸಲಿಡಬೇಕು. ಇತರರಿಗಾಗಿ ಪ್ರಾರ್ಥಿಸುವ ಪ್ರಾರ್ಥನೆಗಳಲ್ಲಿ ಒಂದು ವಿಶೇಷತೆಯಿದೆ. ಯೋಬನು ತನ್ನ ಸ್ನೇಹಿತರಿಗೋಸ್ಕರ ಪ್ರಾರ್ಥಿಸಿದಾಗ ದೇವರು ಅವನನ್ನು ಮೊದಲಿನ ಸ್ಥಿತಿಗೆ ತಂದದ್ದನ್ನು ಜ್ಞಾಪಿಸಿಕೊಳ್ಳಿರಿ (ಯೋಬ 42:10). ಮೂರನೆಯದು, ದೇವರು ಮೂರ್ತವಾದುದನ್ನೂ ವಾಸ್ತವವಾದದ್ದನ್ನೂ ಮಾಡುವಂತೆ ಪ್ರಾರ್ಥನೆಯು ಪ್ರೇರೇಪಿಸುತ್ತದೆ. ಆದುದರಿಂದ ನಾವು ಯಾವಾಗಲೂ ಎಲ್ಲಾ ಬಗೆಯ ಪ್ರಾರ್ಥನೆಗಳನ್ನು ಪ್ರಾರ್ಥಿಸೋಣ. ತಾಳಿಕೊಳ್ಳಲು ಸಾಧ್ಯವಿಲ್ಲದ ಕಷ್ಟಸಂಕಟಗಳಲ್ಲಿ, ಶೋಧನೆಗಳಲ್ಲಿ ತುಳಿದು ಹಾಕುವ ಸವಾಲುಗಳನ್ನು ಎದುರಿಸುವ ಸಂದರ್ಭಗಳಲ್ಲಿ ನಮ್ಮೆಲ್ಲಾ ಭಾರಗಳನ್ನು ಪ್ರಾರ್ಥನೆಯ ಮೂಲಕ ದೇವರ ಮೇಲೆ ಹಾಕೋಣ (ಎಫೆಸ 6:18).

ದಾನಿಯೇಲ 10:12ನ್ನು ಓದಿರಿ. ಪ್ರಾರ್ಥನೆಯು ನಾವು ದೇವರ ಬಗ್ಗೆ

ಮನಸ್ಸಿನಲ್ಲಿ ಒಳ್ಳೆಯದನ್ನು ಭಾವಿಸಿಕೊಂಡು ಆರಾಮವಾಗಿ ಇರುವಂಥ ವಿಷಯಾತ್ಮಕ ಅನುಭವವಲ್ಲ. ಬದಲಾಗಿ ದೇವರನ್ನು ನಮಗಾಗಿ ಕಾರ್ಯನಿರ್ವಹಿಸುವಂತೆ ಮಾಡುವ ವಸ್ತುನಿಷ್ಠ ಅನುಭವವಾಗಿದೆ ಎಂಬುದರ ಬಗ್ಗೆ ದಾನಿ 10:12 ಏನು ಹೇಳುತ್ತದೆ?

**ಸೋಮವಾರ** **ಮಾರ್ಚ್ 9**

## ಒಬ್ಬ ಪುರುಷನ ದರ್ಶನ

ದಾನಿಯೇಲ 10:4–9ನ್ನು ಓದಿರಿ. ಇಲ್ಲಿ ದಾನಿಯೇಲನಿಗೆ ಏನು ಜರುಗಿತು?

ದಾನಿಯೇಲನು ತನಗಾದ ಅನುಭವವನ್ನು ವಿವರಿಸುವಾಗ ಆತನು ಕಂಡ ಭವ್ಯದರ್ಶನದಿಂದ ಚಿತ್ತಸ್ಥೈರ್ಯವನ್ನು ಕಳೆದುಕೊಂಡದ್ದನ್ನು ನಾವು ಭಾವಿಸಿಕೊಳ್ಳುವುದು ಬಹಳ ಕಷ್ಟಕರವಾಗಿದೆ. ಪುರುಷನೊಬ್ಬನು ಕಾಣಿಸಿಕೊಳ್ಳುವುದು ದಾನಿ 7:13ರಲ್ಲಿ ಕಾಣಿಸಿಕೊಂಡ ಮನುಷ್ಯಕುಮಾರನನ್ನು ತಿರುಗಿ ನೆನಪಿಗೆ ತರುತ್ತದೆ.

ಆತನು ಧರಿಸಿದ್ದ ಉಡುಪು ಯಾಜಕನ ಉಡುಪನ್ನು ನೆನಪಿಗೆ ತರುತ್ತದೆ (ಯಾ.ಕಾಂಡ 16:4). ಇದು ಪರಲೋಕದ ದೇವದರ್ಶನ ಗುಡಾರಕ್ಕೆ ಸಂಬಂಧಪಟ್ಟದುದಾಗಿ ವರ್ಣಿಸಲ್ಪಟ್ಟಿರುವ ರೂಪ (ದಾನಿ 8). ಬಂಗಾರವು ಸಹ ಯಾಜಕತೆಯ ಲಾಂಛನವಾಗಿ ಹೆಚ್ಚಿನ ಗೌರವಕ್ಕೆ ಗುರುತಾಗಿದೆ. ಅವನು ದರ್ಶನದಲ್ಲಿ ಕಂಡ ರೂಪವು ಮಿಂಚಿನಂತೆ, ಬೆಂಕಿಯಂತೆ, ತಾಮ್ರದಂತೆ ಮತ್ತು ಸ್ವರವು ಜನಸಂದಣಿಯ ಕೋಲಾಹಲದಂತೆ ಎಂದು ಅಲೌಕಿಕ ಜೀವಿಯಂತೆ ಬಣ್ಣಿಸಲ್ಪಟ್ಟಿದೆ. ಇವನು ಯಾಜಕತ್ವದ, ರಾಜವಂಶೀಯ ಮತ್ತು ಸೈನ್ಯದ ಗುಣಾತಿಶಯಗಳ ಆರೋಪಿಸಿರುವ ವ್ಯಕ್ತಿಯಾಗಿದ್ದಾನೆ. ಈತನ ರೂಪವು ಯೆರಿಕೋ ಪಟ್ಟಣವನ್ನು ವಶಪಡಿಸಿಕೊಳ್ಳುವುದಕ್ಕೆ ಯುದ್ಧಕ್ಕೆ ಹೊರಟಾಗ ಯೆಹೋಶುವನಿಗೆ ಕಾಣಿಸಿಕೊಂಡ ರೂಪಕ್ಕೆ ಬಹಳ ಹೋಲಿಕೆ ಇತ್ತು (ಯೆಹೋಶುವ 5:13, 14). ಯೆಹೋಶುವನು ಯೆರೆಕೋವಿನ ಹತ್ತಿರದಲ್ಲಿದ್ದಾಗ ಆತನ ಎದುರಿನಲ್ಲಿ ಕತ್ತಿಯನ್ನು ಕೈಯಲ್ಲಿ ಹಿಡಿದು ನಿಂತುಕೊಂಡಿದ್ದವನು. ಯೆಹೋವನ ಸೇನಾಪತಿಯಾಗಿದ್ದನು ಇಲ್ಲಿ ಆಸಕ್ತಿಕರವಾಗಿರುವುದೇನೆಂದರೆ 'ಸೇನಾಪತಿ' ಎಂಬುದಾಗಿ

ಅನುವಾದಗೊಂಡಿರುವ ಇಬ್ರಿಯ ಪದ ದಾನಿಯೇಲ 10:21ರಲ್ಲಿ ಪಾಲಕ (ಪ್ರಭು) ಎಂದು ಅನುವಾದಗೊಂಡಿದೆ ಮತ್ತು ಈ ಪದವನ್ನು ಮೀಕಯೇಲನಿಗೆ ಉಪಯೋಗಿಸಲಾಗಿದೆ. ಆದರೆ ದಾನಿಯೇಲ ಮತ್ತೂ ಯೋಹಾನ ನಡುವೆ ಹೆಚ್ಚಿನ ಸಮಾನತೆಗಳು ಸಿಗುತ್ತವೆ. ಯೋಹಾನನು ಕರ್ತನ ದಿನವಾದ ಸಬ್ಬತ್ತಿನ ದಿನದಲ್ಲಿ ಕರ್ತನನ್ನು ದರ್ಶನದಲ್ಲಿ ನೋಡಿದನು.

ದಾನಿಯೇಲ 10ನೇಅಧ್ಯಾಯದಲ್ಲಿರುವ 'ದೇವಕುಮಾರನಿಗೂ' ಯಹೋಶುವ 5:13–15 ದಲ್ಲಿರುವ ಯೆಹೋವನ 'ಸೇನಾಪತಿ'ಗೂ ಯೋಹಾನ 1:12–18ರಲ್ಲಿರುವ 'ಮನುಷ್ಯಕುಮಾರ'ನಿಗೂ ಯಾವ ಸಾಮ್ಯತೆಗಳಿವೆ?

ದಾನಿಯೇಲನು ಹೇಳುವ ಪ್ರಕಾರ ಅವನ ಜೊತೆಗಿದ್ದವರಿಗೆ ದೊಡ್ಡ ನಡುಕವು ಹಿಡಿಯಿತು ಮತ್ತು ಅವನು ಸಹ ತನ್ನ ಶಕ್ತಿಯನ್ನೆಲ್ಲಾ ಕಳಕೊಂಡು ನಿತ್ರಾಣನಾಗಿ ಭೂಮಿಯ ಮೇಲೆ ಬಿದ್ದುಕೊಂಡಿದ್ದನು. ದೇವರು ತನ್ನ ಇರುವಿಕೆಯನ್ನು ದಾನಿಯೇಲನಿಗೆ ತೋರಿಸಿದಾಗ ಆತನು ಮೂಕನಾದನು. ಆತನು ಕೂಡಲೇ ಅನುಭವಿಸಿದ ಭಯವು ಏನೇ ಇರಲಿ, ದೇವರು ಚರಿತ್ರೆಯನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಾನೆಂಬುದನ್ನು ದರ್ಶನವು ತೋರಿಸುತ್ತದೆ. ನಿಜವಾಗಿ ದರ್ಶನವು ತೆರೆದುಕೊಳ್ಳುತ್ತಿದ್ದಂತೆಯೇ ದಾನಿಯೇಲನಿಗೆ ಮಾನವನ ಚರಿತ್ರೆಯ ಆರಂಭ ಮತ್ತು ಅಂತ್ಯಪ್ರವಾದಿಗಳ ಕಾಲದಿಂದ ಹಿಡಿದು ದೇವರ ರಾಜ್ಯವು ಸ್ಥಾಪಿತವಾಗುವವರೆಗೂ (ದಾನಿಯೇಲ 11 ಮತ್ತು 12ನೇ ಅಧ್ಯಾಯಗಳು).

ನಾವು ದಾನಿಯೇಲನ ಪುಸ್ತಕದಲ್ಲಿ ಮತ್ತೆ ಮತ್ತೆ ದೇವರು ಮಾನವ ಚರಿತ್ರೆಯನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ ಎಂದು ಹೇಳುವಾಗ ನಮ್ಮ ವೈಯಕ್ತಿಕ ಬಾಳಿನಲ್ಲಿ ಏನು ಮಾಡಬಲ್ಲನು?

**ಮಂಗಳವಾರ** **ಮಾರ್ಚ್ 10**

## ದೇವದೂತನ ಹಸ್ತಸ್ಪರ್ಶ

ಓದಿರಿ : ದಾನಿಯೇಲ 10:10–19. ದೇವದೂತನು ದಾನಿಯೇಲನಿಗೆ ಹಸ್ತಸ್ಪರ್ಶ ಮಾಡಿದಾಗಲೆಲ್ಲಾ ಅವನಿಗೇನಾಯ್ತು? ದೈವಪ್ರಭಾವದ ಪ್ರಕಾಶದಿಂದ ತುಂಬಿದವನಾಗಿ ದಾನಿಯೇಲನು ಭೂಮಿಯ ಮೇಲೆ ಅಡಿಮೊಗವಾಗಿ

ಬಿದ್ದುಕೊಳ್ಳುತ್ತಾನೆ. ಆವಾಗ ದೇವದೂತನು ದಾನಿಯೇಲನನ್ನು ಮುಟ್ಟಿ ಧೈರ್ಯ ಪಡಿಸಲು ಅವನ ಮುಂದೆ ಪ್ರತ್ಯಕ್ಷನಾಗುತ್ತಾನೆ. ನಾವು ಇದರ ವಿವರಣೆ ಓದುವಾಗ ದೇವದೂತನು ದಾನಿಯೇಲನನ್ನು ಮೂರುಸಲ ಮುಟ್ಟಿದ್ದನ್ನು ಗಮನಿಸಬಹುದು.

ಮೊದಲ ಸ್ಪರ್ಶ ದಾನಿಯೇಲನು ಮೇಲೆದ್ದು ಪರಲೋಕದಿಂದ ಬರುವ ದೇವರ ಮಾತುಗಳನ್ನು ಕೇಳಿಸಿಕೊಳ್ಳುವಂತೆ ಮಾಡಿತು: ದಾನಿಯೇಲನೇ, ಭಯಪಡಬೇಡ, ನೀನು ದೈವಸಂಕಲ್ಪವನ್ನು ವಿಮರ್ಶಿಸುವುದಕ್ಕೂ ನಿನ್ನನ್ನು ದೇವರ ಮುಂದೆ ತಗ್ಗಿಸಿಕೊಳ್ಳುವುದಕ್ಕೂ ಮನಸ್ಸಿಟ್ಟು ಮೊದಲನೆಯ ದಿನದಲ್ಲಿಯೇ ನಿನ್ನ ವಿಜ್ಞಾಪನೆಯು ದೇವರಿಗೆ ಮುಟ್ಟಿತು; ಆ ವಿಜ್ಞಾಪನೆಯ ನಿಮಿತ್ತವೇ ನಾನು ಬಂದೆನು (ದಾನಿ 10:12) ಎಂದು ದೂತನು ಹೇಳಿದನು. ದಾನಿಯೇಲನ ಪ್ರಾರ್ಥನೆಯು ಪರಲೋಕವು ಕಾರ್ಯೋನ್ಮುಖವಾಗುವಂತೆ ಮಾಡಿತು.

ದೇವರು ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆಂಬುದಕ್ಕೆ ಇದು ಭರವಸೆಯಾಗಿ ಬರುತ್ತದೆ, ಸಂಕಟ ಸಮಯಗಳಲ್ಲಿ ಇದು ನಮಗೆ ದೊಡ್ಡ ಆದರಣೆಯನ್ನು ಕೊಡುತ್ತದೆ.

ಎರಡನೆಯ ಸ್ಪರ್ಶ ದಾನಿಯೇಲನು ಮಾತಾಡುವಂತೆ ಮಾಡಿತು. ಪ್ರವಾದಿಯು ದೇವರ ಮುಂದೆ ತನ್ನ ಭಯ ಮತ್ತು ಆವೇಶದ ಅನಿಸಿಕೆಗಳನ್ನು ಹೇಳತೊಡಗಿದನು: "ಎನ್ನೊಡೆಯನೇ, ಈ ದರ್ಶನದಿಂದ ವೇದನೆಗಳು ನನ್ನನ್ನು ಆಶ್ರಯಿಸಿವೆ, ನಿತ್ರಾಣನಾಗಿದ್ದೇನೆ. ಎನ್ನೊಡೆಯನ ಸೇವಕನಾದ ನನ್ನಂಥವನು ಎನ್ನೊಡೆಯನಾದ ನಿನ್ನಂಥವನ ಸಂಗಡ ಹೇಗೆ ಮಾತಾಡಬಹುದು? ಈಗಿನಿಂದ ಶಕ್ತಿಯನ್ನೆಲ್ಲಾ ಕಳಕೊಂಡವನಾಗಿದ್ದೇನೆ, ನನ್ನಲ್ಲಿ ಉಸಿರೇ ಇಲ್ಲ" ಎಂದು ಹೇಳಿದನು (ದಾನಿಯೇಲ 10:16,17). ಆದುದರಿಂದ ದೇವರು ತಾನೊಬ್ಬನೇ ಮಾತಾಡುವವನಾಗಿರದೆ ನಾವೂ ಕೂಡ ನಮ್ಮ ಬಾಯ್ತೆರದು ನಮ್ಮ ಅವಶ್ಯಕತೆಗಳು, ಆಕಾಂಕ್ಷೆಗಳು ಮತ್ತು ಭಾವನೆಗಳನ್ನು ಹೇಳಿಕೊಳ್ಳುವಂತೆ ಮಾಡುತ್ತವೆ.

ಮೂರನೆಯ ಸ್ಪರ್ಶವು ಅವನಲ್ಲಿ ಬಲವನ್ನು ತಂದಿತು. ದಾನಿಯೇಲನು ತನ್ನ ಬಲಹೀನತೆಯನ್ನು ಅರಿತವನಾದಾಗ ದೇವದೂತನು ಅವನನ್ನು ಮುಟ್ಟಿ ದೇವರ ಸಮಾಧಾನದಿಂದ ಅವನಿಗೆ ಆದರಣೆ ನೀಡುತ್ತಾನೆ. "ಅತಿ ಪ್ರಿಯನೇ,

ಭಯಪಡಬೇಡ; ನಿನಗೆ ಸಮಾಧಾನವಿರಲಿ, ಬಲಗೊಳ್ಳು, ಬಲಗೊಳ್ಳು ಎಂದು ಹೇಳಿದನು (ದಾನಿಯೇಲ 10:19). ದಾನಿಯೇಲನು ಮಾಡಿದ ವಿಜ್ಞಾಪನೆಗಳಿಗೆ ಪ್ರತಿಕ್ರಿಯೆಯಾಗಿ ದೇವದೂತನು ದಾನಿಯೇಲನಿಗೆ ದರ್ಶನದ ಸೂಕ್ಷ್ಮ ಪರಿಜ್ಞಾನವನ್ನೂ ತಿಳುವಳಿಕೆಯನ್ನೂ ಕೊಡುವುದಕ್ಕಾಗಿ ಕಳುಹಿಸಲ್ಪಟ್ಟನೆಂಬುದನ್ನು ಜ್ಞಾಪಿಸಿಕೊಳ್ಳೋಣ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, 11ನೇ ಅಧ್ಯಾಯದಲ್ಲಿ ಅನುಸರಿಸಿರುವ ದರ್ಶನವು ಆತನು ಯೆರೂಸಲೇಮಿನ ಪ್ರಸ್ತುತ ಪರಿಸ್ಥಿತಿಗೆ ಮಾಡುತ್ತಿದ್ದ ದುಃಖಕ್ಕೂ ಧ್ಯಾನಕ್ಕೂ ಪ್ರತಿಕ್ರಿಯೆ ನೀಡಿ ಆತನನ್ನು ಧೈರ್ಯಪಡಿಸುವ ಉದ್ದೇಶದಿಂದ ಕೊಡಲ್ಪಟ್ಟಿತು. ದೇವರು ನಮ್ಮ ಪರವಾಗಿರುವಾಗ ನಾವು ಕಷ್ಟಗಳನ್ನೆದುರಿಸುತ್ತಿರುವಾಗಲೂ ಸಮಾಧಾನ ಹೊಂದಬಹುದು. ಆತನ ಪ್ರೀತಿಯ ಸ್ಪರ್ಶವು ಭವಿಷ್ಯವನ್ನು ಭರವಸೆಯಿಂದ ನೋಡಲು ಶಕ್ತಿಯನ್ನು ನೀಡುತ್ತದೆ.

"ನಮ್ಮ ಸರ್ವೇಸಾಮಾನ್ಯವಾದ ಜೀವನದಲ್ಲಿ ಪರಲೋಕವು ನಮಗೆ ಬಹಳ ಹತ್ತಿರವಾಗಿರಲು ಸಾಧ್ಯವಿದೆ". ಎಲೆನ್ ಜಿ ವೈಟಮ್ಮನವರ ದಿ ಡಿಸೈರ್ ಆಫ್ ಏಜಸ್" ಪುಸ್ತಕದಲ್ಲಿ ಪುಟ 48. ಪರಲೋಕವೂ ಭೂಲೋಕವು ಬಹಳ ನಿಕಟವಾಗಿವೆ ಎಂದು ಎಷ್ಟುಸಲ ಆಲೋಚಿಸುತ್ತೇವೆ? ಈ ಸತ್ಯವನ್ನು ಯಾವಾಗಲೂ ನಮ್ಮ ಹೃದಯದಲ್ಲಿ ಮತ್ತು ಮನಸ್ಸಿನಲ್ಲಿ ಇಟ್ಟುಕೊಂಡಿರುವಾಗ ನಾವು ಹೇಗೆ ವ್ಯತ್ಯಾಸವಾಗಿ ಜೀವಿಸುತ್ತೇನೆ?

**ಬುಧವಾರ** **ಮಾರ್ಚ್ 11**

## ಒಂದು ಮಹಾಹೋರಾಟ (ಸಂಘರ್ಷ/ ವಿರಸ)

ಓದಿರಿ : ದಾನಿಯೇಲ 10:20,21. ದಾನಿಯೇಲನಿಗೆ ಇಲ್ಲಿ ಏನು ಪ್ರಕಟಿತವಾಗಿದೆ?

ಮಾನವಚರಿತ್ರೆಯ ದೃಶ್ಯಗಳ ಹಿಂದೆ ವಿಶ್ವಮಟ್ಟದಲ್ಲಿ ನಡೆಯುವ ಹೋರಾಟಗಳು ಇರುವುದನ್ನು ದಾನಿಯೇಲನಿಗೆ ಪ್ರಕಟಿಸಲು ಪರಲೋಕದ ಸಂದೇಶಕನು ಪರದೆಯನ್ನು ಪಕ್ಕಕ್ಕೆ ಎಳೆಯುತ್ತಾನೆ. ದಾನಿಯೇಲನು ಪ್ರಾರ್ಥಿಸ ತೊಡಗುತ್ತಿದ್ದಂತೆಯೇ ಆಧ್ಯಾತ್ಮಿಕ ಯುದ್ಧವು ಪರಲೋಕ ಮತ್ತು ಭೂಲೋಕದ

ನಡುವೆ ಪ್ರಾರಂಭವಾಗುತ್ತದೆ. ಯೆಹೂದ್ಯರು ದೇವಾಲಯ ಕಟ್ಟಡದ ಕೆಲಸವನ್ನು ಮುಂದುವರೆಸುವುದಕ್ಕಾಗಿ ಅವರನ್ನು ಯೆರೂಸಲೇಮಿಗೆ ಕಳುಹಿಸುವಂತೆ ಮಾಡಲು ದಿವ್ಯದೂತರು ಪಾರಸಿಯ ರಾಜನ ಜೊತೆ ಹೋರಾಟ ಮಾಡುತ್ತಾರೆ. ದಾನಿಯೇಲ 10ನೇ ಅಧ್ಯಾಯದ ಆರಂಭದಿಂದಲೂ ಆ ರಾಜನು ಪಾರಸಿಯನಾದ ಕೋರೆಷನೆಂಬುದು ನಮ್ಮೆಲ್ಲರಿಗೂ ತಿಳಿದಿದೆ. ಏನೇ ಆದರೂ, ನರಮನುಷ್ಯನಾದ ರಾಜನು ಅವನಷ್ಟಕ್ಕೆ ಅವನು ಬಿಡಲ್ಪಟ್ಟಿದ್ದಾಗ್ಯೂ. ಪರಲೋಕ ದೂತರುಗಳಿಗೆ ಅಸಾಧಾರಣವಾದ ವಿರೋಧತೆ ಒಡ್ಡಲು ಅವನಿಂದ ಸಾಧ್ಯವಾಗಲಿಲ್ಲ. ನರಮನುಷ್ಯನಾದ ರಾಜನ ಹಿಂದೆ ಆತ್ಮೀಕ ಕಾರ್ಯಕರ್ತನು ಕೋರೆಷನನ್ನು ಯೆಹೂದ್ಯರು ದೇವಾಲಯವನ್ನು ಕಟ್ಟದಂತೆ ತಡೆಯಲು ಪ್ರೇರೇಪಿಸುತ್ತಾನೆ.

ಇಂತಹುದೇ ಒಂದು ಸನ್ನಿವೇಶ ಯೆಹೆಜ್ಕೇಲ 28ನೇ ಅಧ್ಯಾಯದಲ್ಲಿ ಸಿಗುತ್ತದೆ. ಇದರಲ್ಲಿ ತೂರ್‌ನ ರಾಜನು ಸೈತಾನನನ್ನು ಪ್ರತಿನಿಧಿಸುತ್ತಾನೆ. ಸೈತಾನನು ತಾನೆ ಆ ಪಟ್ಟಣದ ರಾಜನ ಹಿಂದೆಯಿದ್ದ ಆತ್ಮಶಕ್ತಿಯಾಗಿದ್ದನು. ಆದುದರಿಂದ ಮೀಕಾಯೇಲನ ಪಾರಸಿಯ ರಾಜನ ವಿರುದ್ಧದ ಹೋರಾಟದಲ್ಲಿ ಸೈತಾನ ಮತ್ತು ಆತನ ಕಾರ್ಯಕರ್ತರು ಸಹ ಭಾಗಿಯಾಗಿದ್ದಾರೆ. ಯೆರೂಸಲೇಮಿನ ದೇವಾಲಯವನ್ನು ಕಟ್ಟುವುದಕ್ಕೆ ವಿರೋಧತೆಯ ಒಂದು ಭಾಗ ಮಾನವರಾಗಿದ್ದಾರೆ. ಅದರ ಇನ್ನೊಂದು ಭಾಗ ದುರಾತ್ಮಗಳ ಸೇನೆಯಾಗಿತ್ತು ಎಂಬುದನ್ನು ಇದು ತೋರಿಸುತ್ತದೆ. ದಾನಿಯೇಲ 10:13ನ್ನು ಓದಿರಿ. ಇಲ್ಲಿ ವರ್ಣಿತವಾಗಿರುವ ಹೋರಾಟವು ಎಂಥದ್ದು?

"ಮೇಧ್ಯ–ಪಾರಸಿಯ ರಾಜ್ಯವು ದೇವಜನರಿಗೆ ಸಹಾಯ ಮಾಡದ ಹಾಗೆ ಸೈತಾನನು ಶ್ರಮಿಸುತ್ತಿರುವಾಗ ದೇವದೂತರು ಗಡಿಪಾರಾದವರ (ಯೆಹೂದ್ಯರ) ಪರವಾಗಿ ಕಾರ್ಯನಿರ್ವಹಿಸಿದರು. ಇದು ಎಂತಹ ಹೋರಾಟವಾಗಿತ್ತೆಂದರೆ ಇಡೀ ಪರಲೋಕವೇ ಇದರ ವಿಷಯದಲ್ಲಿ ಆಸಕ್ತಿ ಹೊಂದಿತ್ತು. ಪ್ರವಾದಿಯಾದ ದಾನಿಯೇಲನ ಮುಖಾಂತರ ನಮಗೆ ಒಳ್ಳೆಯ ಮತ್ತು ದುಷ್ಟಶಕ್ತಿಗಳ ನಡುವೆ ನಡೆಯುವ ಮಹಾಹೋರಾಟದ ಮಿನುಗುನೋಟವು ಕೊಡಲ್ಪಟ್ಟಿದೆ. ದೇವದೂತನಾದ ಗಬ್ರಿಯೇಲನು ಮೂರು ವಾರಗಳು ಸತತವಾಗಿ ಅಂಧಕಾರದ

ದುಷ್ಟಶಕ್ತಿಗಳು ಕೋರೆಷನ ಮನಸ್ಸಿನ ಮೇಲೆ ಪ್ರಭಾವ ಬೀರುವುದನ್ನು ತಡೆಯಲು ಹೋರಾಡಿದನು. ಆವಾಗ ಸ್ವತಹ ಕ್ರಿಸ್ತನೇ ಗಬ್ರಿಯೇಲನಿಗೆ ಸಹಾಯಕನಾಗಿ ಬಂದನು. ಪಾರಸಿಯ ರಾಜ್ಯದ ಪಾಲಕನು ನನ್ನನ್ನು ಇಪ್ಪತ್ತೊಂದು ದಿನಗಳ ತನಕ ತಡೆದನು ಎಂಬುದಾಗಿ ಗಬ್ರಿಯೇಲನು ಹೇಳುತ್ತಾನೆ. ಆದರೆ ಯೆಹೋವನ ಸೇನಾಪತಿಯಾದ ಮೀಕಾಯೇಲನು ನನಗೆ ಸಹಾಯ ಮಾಡಲಾಗಿ ನಾನು ಪಾರಸಿಯ ರಾಜನೊಂದಿಗೆ ಇರಲು ಸಾಧ್ಯವಾಯಿತೆಂದು ನುಡಿಯುತ್ತಾನೆ (ದಾನಿ 10:13). ಇಡೀ ಪರಲೋಕವು ದೇವಜನರ ಪರವಾಗಿ ಏನು ಮಾಡಬಹುದಾಗಿತ್ತೋ ಅದನ್ನು ಮಾಡಿತು. ಅಂತಿಮವಾಗಿ ಜಯವು ಲಭಿಸಿತು. ವೈರಿಯ ಬಲವನ್ನು ಕೋರೆಷನ ಮತ್ತು ಆತನ ಮಗ ಕಾಂಬೂಸಿಯ ಏಳೂವರೆ ವರ್ಷದ ಆಡಳಿತದ ಕಾಲದ ಪರ್ಯಂತ ತಡೆಹಿಡಿಯಲಾಗಿತ್ತು". ಎಲೆನ್ ಜಿ ವೈಟಮ್ಮನವರ ಪುಸ್ತಕ "ಪ್ರವಾದಿಗಳು ಮತ್ತು ಅರಸರು", ಪುಟ 571, 572.

**ಗುರುವಾರ** **ಮಾರ್ಚ್ 12**

## ಜಯಹೊಂದಿದ ಒಬ್ಬ ಪ್ರಭು

ದಾನಿಯೇಲ ಪುಸ್ತಕದಲ್ಲಿ ಅತಿಮುಖ್ಯವಾದ ಪಾತ್ರ ಯಾವುದೆಂದರೆ ಆರಂಭದಲ್ಲಿ 'ಮನುಷ್ಯಕುಮಾರ'ನೆಂದು ಕರೆಯಲ್ಪಟ್ಟ ವ್ಯಕ್ತಿ (ದಾನಿ 7:13) ಅಥವಾ "ಯೆಹೋವನ ಸೇನಾಪತಿ" (ದಾನಿಯೇಲ 8:11). ಘಟನಾಂತ್ಯದಲ್ಲಿ ಅವನ ಹೆಸರು ಮೀಕಾಯೇಲನೆಂಬುದಾಗಿ ನಮಗೆ ತಿಳಿಯುತ್ತದೆ.

'ಮೀಕಾಯೇಲ' ಎಂಬ ಹೆಸರಿನ ಅರ್ಥವೇನೆಂದರೆ ದೇವರಂತಿರುವವನು, ಗಬ್ರಿಯೇಲನು ಪಾರಸಿಯ ರಾಜನ ಜೊತೆ ಹೋರಾಡುವಾಗ ಈತನು ಗಬ್ರಿಯೇಲನ ಸಹಾಯಕ್ಕಾಗಿ ಬಂದನು (ದಾನಿ 10:13). ದೂತನೆಂದು ಸೂಚಿತನಾಗಿರುವ ಈ ಪರಲೋಕವಾಸಿಯು 'ನಿಮ್ಮ ಪಾಲಕನಾದ ಮೀಕಾಯೇಲನು' ಎಂಬುದಾಗಿ ಕರೆಯಲ್ಪಟ್ಟಿದ್ದಾನೆ (ದಾನಿ 10:21). ಇವನೇ 'ದೇವಜನರಪಾಲಕ'. ದಾನಿಯೇಲ 12:1ರಲ್ಲಿ ಮೀಕಾಯೇಲನು ದೇವಜನರ ಪರವಾಗಿ ನಿಲ್ಲುವವನು ಎನ್ನಿಸಿಕೊಳ್ಳುತ್ತಾನೆ. ಯೂದ 9ನೇ ವಚನದಲ್ಲಿ ಪ್ರಧಾನ ದೇವದೂತನೆಂತಲೂ ಕರೆಯಲ್ಪಟ್ಟಿರುವ ಮೀಕಾಯೇಲನು ಸೈತಾನನೊಡನೆ

ಹೋರಾಡಿ ಮೋಶೆಯನ್ನು ಪುನರುತ್ಥಾನ ಪಡಿಸಿದನು. ಪ್ರಕಟನೆ 12:7 ಮೀಕಾಯೇಲನು ಪರಲೋಕ ಸೈನ್ಯದ ಸೇನಾಪತಿಯಾಗಿ ಸೈತಾನನ್ನೂ ಆತನ ಕಾರ್ಯಕರ್ತರನ್ನು ಸೋಲಿಸುದುದನ್ನು ತಿಳಿಸುತ್ತದೆ. ಆದುದರಿಂದ ಮೀಕಾಯೇಲನು ಯೇಸುಕ್ರಿಸ್ತನಲ್ಲದೆ ಬೇರೆ ಯಾರೂ ಅಲ್ಲ. ಪಾರಸಿಯ ರಾಜ್ಯಕ್ಕೆ ಪಾಲಕನಿರುವಂತೆ ದೇವಜನರಿಗೆ ಮೀಕಾಯೇಲನು ಪಾಲಕನಾಗಿದ್ದು ಸ್ವತಃ ತಾನೇ ಹೋರಾಟ ಮಾಡಿ ತನ್ನ ಜನರಿಗೆ ವಿಶ್ವಯುದ್ಧದಲ್ಲಿ ಜಯ ಹೊಂದುತ್ತಾನೆ.

ಓದಿರಿ : ಕೊಲಸ್ಸೆ 2:15. ಯೇಸುಕ್ರಿಸ್ತನು ವಿಶ್ವಯುದ್ಧದಲ್ಲಿ ಜಯಹೊಂದಿದನೆ?

ನಾವು ದುಷ್ಟಶಕ್ತಿಗಳ ಜೊತೆ ಹೋರಾಡುವಾಗ ನಮ್ಮ ಬಲಾಢ್ಯನಾದ ಯೇಸುಕ್ರಿಸ್ತನಲ್ಲಿ ನಾವು ವಿಶ್ವಾಸ ಇಟ್ಟುಕೊಳ್ಳಬೇಕು. ಯೇಸುಕ್ರಿಸ್ತನು ಸಾರ್ವಜನಿಕ ಸೇವೆಯ ಆರಂಭದಲ್ಲಿಯೇ ಸೈತಾನನನ್ನು ಸೋಲಿಸಿದನು. ಆತನು ಈ ಭೂಮಿಯ ಮೇಲಿರುವ ಆತನನ್ನು ಶೋಧಿಸಿದಾಗಲೂ ಸೈತಾನನನ್ನು ಸೋಲಿಸಿದನು, ಆತನು ಪೈಶಾಚಿಕ ಗುಂಪನ್ನು ಸೋಲಿಸಿ ಜನರನ್ನು ಅಂಧಕಾರಶಕ್ತಿಯಿಂದ ಬಿಡಿಸಿದನು. ಯೇಸುಕ್ರಿಸ್ತನು ತನ್ನನ್ನು ತಾನು ಕಲ್ವಾರಿ ಶಿಲುಬೆಗೆ ಒಪ್ಪಿಸಿಕೊಡಬಾರದೆಂದು ಪೇತ್ರನು ಪ್ರಯತ್ನ ಮಾಡಿದಾಗಲೂ ಅದರ ಹಿಂದಿರುವ ದುಷ್ಟನನ್ನು ಸೋಲಿಸಿದನು. ತನ್ನ ಮರಣವು ಸಮೀಪವಾಗಿರುವಾಗ ಕಡೆಯದಾಗಿ ತನ್ನ ಶಿಷ್ಯರಿಗೆ ಸೈತಾನನ ಮೇಲೆ ನಿರ್ಣಾಯಕ ಗೆಲುವನ್ನು ಸಾಧಿಸುವುದನ್ನು ಹೇಳಿದನು: "ಈಗ ಈ ಲೋಕಕ್ಕೆ ತೀರ್ಪು ಆಗುತ್ತದೆ; ಈಗ ಇಹಲೋಕಾಧಿಪತಿಯು ಹೊರಗೆ ನೂಕಲ್ಪಡುವನು. ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು ಎಂದು ಹೇಳಿದನು" (ಯೋಹಾನ 12:31,32).

ಕೆಲವು ಸಲ ನಾವು ನಮ್ಮ ಸುತ್ತಲೂ ನೋಡುವಾಗ ವಿಷಯಗಳು ನಿಜವಾಗಿಯೂ ಕೆಟ್ಟದಾಗಿ ಕಾಣಿಸುತ್ತವೆ. ಬಲಾತ್ಕಾರ ಅನೈತಿಕತೆ, ಕೆಡುಕು ಮತ್ತು ರೋಗಗಳು ಎಲ್ಲಾ ಕಡೆಯಿಂದಲೂ ವ್ಯೈದೋರುತ್ತವೆ. ರಕ್ತಮಾಂಸಧಾರಿಯಲ್ಲದ ನಮ್ಮ ವೈರಿಯು ನಮ್ಮನ್ನು ಎಲ್ಲಾ ಕಡೆಯಿಂದಲೂ ಆಕ್ರಮಣ ಮಾಡುತ್ತಾನೆ. ಆದರೆ ನಾವು ಎಷ್ಟೇ ಕಷ್ಟದ ಹೋರಾಟವನ್ನು ಮಾಡಬೇಕಾಗಿದ್ದರೂ ಯೇಸುಕ್ರಿಸ್ತನು ನಮ್ಮ ಪರವಾಗಿ ಹೋರಾಡುತ್ತಾನೆ. ಆತನು

ನಮ್ಮ ಪಾಲಕನಾಗಿದ್ದು ಪರಲೋಕದ ದೇವದರ್ಶನ ಗುಡಾರದಲ್ಲಿ ಮಹಾಯಾಜಕನಾಗಿದ್ದಾನೆ.

ರೋಮಾಪುರದವರಿಗೆ ಬರೆದ ಪತ್ರಿಕೆ 8:37–39ನ್ನು ಓದಿರಿ. ನಮ್ಮ ಕ್ರೈಸ್ತೀಯ ನಿಜಜೀವಿತದಲ್ಲಿ ವಿಜಯಶಾಲಿಗಳಾಗುವ ವಾಗ್ದಾನವನ್ನು ಒಂದು ವಾಸ್ತವ ಅನುಭವವಾಗಿಸುವುದು ಹೇಗೆ?

**ಶುಕ್ರವಾರ** **ಮಾರ್ಚ್ 13**

**ಹೆಚ್ಚಿನ ಚಿಂತನೆಗೆ :** "ದೇವದೂತನಾದ ಗಬ್ರಿಯೇಲನು ಸತತ ಮೂರು ವಾರಗಳ ಕಾಲ ಕೋರೆಷನ ಮನಸ್ಸಿನ ಮೇಲೆ ಪ್ರಭಾವ ಬೀರುವ ಅಂಧಕಾರಶಕ್ತಿಗಳ ವಿರುದ್ಧ ಹೋರಾಡಿದನು. ದೇವಜನರ ಪರವಾಗಿ ಇಡೀ ಪರಲೋಕವು ಏನೇನು ಮಾಡಬಹುದಾಗಿತ್ತೋ ಅವುಗಳನ್ನೆಲ್ಲಾ ಮಾಡಿದ್ದಿತು. ಕೋರೆಷನ ಮತ್ತು ಅವನ ಮಗ ಕಾಂಬೂಸಿಯನ ಆಳ್ವಿಕೆಯ ಕಾಲದಲ್ಲಿ ವೈರಿಯ ಸಮಸ್ತ ಬಲವನ್ನು ನಿಯಂತ್ರಣಕ್ಕೆ ತಂದು ಜಯ ಸಾಧಿಸಲಾಯ್ತು". ಎಲೆನ್ ಜಿ ವೈಟಮ್ಮನವರ "ಪ್ರವಾದಿಗಳು ಮತ್ತು ಅರಸರು" ಎಂಬ ಪುಸ್ತಕದಲ್ಲಿ 572ನೇ ಪುಟ.

ಪರಲೋಕ ಸಾರ್ವಭೌಮನು ದಾನಿಯೇಲನಿಗೆ ಎಂಥಾ ಮಹತ್ತಾದ ಗೌರವವನ್ನು ತೋರಿಸಿದ್ದಾನೆ! ಭಯದಿಂದ ನಡುಗುತ್ತಿದ್ದ ತನ್ನ ಸೇವಕನಿಗೆ ಆದರಣೆಯನ್ನು ನೀಡಿ "ನಿನ್ನ ಪ್ರಾರ್ಥನೆಯು ಪರಲೋಕವನ್ನು ಮುಟ್ಟಿತೆಂದು" ಅವನಿಗೆ ಭರವಸೆ ನೀಡುತ್ತಾನೆ.

ಆತನ ಶ್ರದ್ಧಾಯುಕ್ತ ಮನವಿಗೆ ಉತ್ತರವಾಗಿ ಗಬ್ರಿಯೇಲನು ಪಾರಸಿಯ ರಾಜ ಕೋರೇಷನ ಹೃದಯದ ಮೇಲೆ ಪರಿಣಾಮ ಬೀರುವಂತೆ ಭೂಮಿಗೆ ಕಳುಹಿಸಲ್ಪಟ್ಟನು. ಚಕ್ರವರ್ತಿಯು ದೇವರ ಆತ್ಮನ ಪ್ರೇರಣೆಯನ್ನು ದಾನಿಯೇಲನು ಇಪ್ಪತ್ತೊಂದು ದಿನಗಳವರೆಗೆ ಉಪವಾಸ ಮಾಡುತ್ತಾ ಪ್ರಾರ್ಥನೆಯನ್ನು ಮಾಡುತ್ತಿರುವಾಗ ವಿರೋಧಿಸಿದನು. ಆದರೆ ದೇವಜನರ ಪಾಲಕನಾದ, ಪ್ರಧಾನ ದೇವದೂತನಾದ ಮೀಕಾಯೇಲನು ಬಿಡದೆ ಮಾಡಿದ ದಾನಿಯೇಲನ ಪ್ರಾರ್ಥನೆಗೆ ನಿರ್ಣಾಯಕವಾದ ಕ್ರಮವನ್ನು ತೆಗೆದುಕೊಳ್ಳುವಂತೆ ಅರಸನ ಕಠಿಣವಾದ ಹೃದಯವನ್ನು ತಿರುಗಿಸಲು ಪ್ರತ್ಯಕ್ಷನಾದನು"– ಎಲೆನ್ ಜಿ ವೈಟಮ್ಮನವರ "ದಿ

ಸಾನ್ಟಿಫೈಡ್ ಲೈಫ್" ಎಂಬ ಪುಸ್ತಕದ 51ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಕ್ರೈಸ್ತೀಯ ಇತಿಹಾಸದಲ್ಲಿ ಈ ಸತ್ಯವನ್ನು ಕಂಡುಕೊಂಡ ಮೊದಲ ಜನರು ನಾವಲ್ಲದಿದ್ದರೂ ಅಡ್ವೆಂಟಿಸ್ಟರಾದ ನಾವು 'ಮಹಾಹೋರಾಟ'ವನ್ನು ಬಲಯುತವಾಗಿ ಸಮರ್ಥಿಸಿಕೊಂಡು ಬರುತ್ತಿದ್ದೇವೆ. ಇಡೀ ವಿಶ್ವವೇ ಸೈತಾನ ಮತ್ತು ಯೇಸುಕ್ರಿಸ್ತನ ನಡುವೆ ನಡೆಯುವ ಈ ದೀರ್ಘ ಹೋರಾಟದ ಭಾಗವಾಗಿದೆ. ಪ್ರತಿ ಮನುಷ್ಯನೂ ಈ ಹೋರಾಟದಲ್ಲಿ ಪಾಲ್ಗೊಂಡಿರುತ್ತಾನೆ. ಧರ್ಮಾತೀತ ಜನರೂ ಸಹಾ ಈ ವಿಧವಾದ ಹೋರಾಟದಲ್ಲಿ ಮುಳುಗುತ್ತೇವೆ ಎಂದು ಇದರ ವಾಸ್ತವಿಕತೆಯು ಬಗ್ಗೆ ಮಾತ್ತಾಡುತ್ತಾರೆ. ಈ ಮಹಾಹೋರಾಟದಲ್ಲಿ ನಿಮಗಾಗಿರುವ ಸ್ವಂತ ಅನುಭವವೇನು? ನಿಮ್ಮ ಸ್ವಂತ ಜೀವನದಲ್ಲಿ ಇದು ನಿಮಗೆ ಪ್ರಕಟವಾಗಿರುವುದನ್ನು ನೀವು ಹೇಗೆ ನೋಡಿದ್ದೀರಿ? ಹೀಗೆ ಹೋರಾಡುತ್ತಿರುವವರಿಗೂ ಸಹಾ ಸಹಾಯವಾಗುವಂಥ ಏನನ್ನು ಕಲಿತಿರುವಿರಿ?

2. ಎಫೆಸ 6:10–18ನ್ನು ಓದಿರಿ. ಇಲ್ಲಿ ಪೌಲನು ಸೈನಿಕನು ಯುದ್ಧದ ಕಲ್ಪನೆಯನ್ನು ಉಪಯೋಗಿಸಿದ್ದಾನೆ. ಯುದ್ಧಕ್ಕೆ ಸಂಬಂಧಪಡುವ ಯಾವ ಸಲಹೆಗಳು ಮಹಾಹೋರಾಟಕ್ಕಾಗಿ ನಮಗೆ ಕೊಡಲ್ಪಟ್ಟಿವೆ?

3. ದಾನಿಯೇಲ 10:11 ಮತ್ತು ಎರಡನೆಯ ಸಲ (ದಾನಿ 9:23) ದಾನಿಯೇಲನು 'ಅತಿಪ್ರಿಯನೆ' ಎಂದು ಕರೆಯಲ್ಪಡುತ್ತಾನೆ. ಸಮೀಪದ ಭಾವನಾತ್ಮಕವಾದ ಕೊಂಡಿಯ ಬಗ್ಗೆ ಇದು ಏನನ್ನು ಹೇಳುತ್ತದೆ? ಆಧುನಿಕ ಪ್ರಪಂಚದ ನಿರೀಶ್ವರವಾದಿಗಳ ಸಾಮಾನ್ಯ ಅಭಿಪ್ರಾಯಗಳಿಗೆ ಹೋಲಿಸಿದಾಗ ವಾಸ್ತವವು ಆಮೂಲಾಗ್ರವಾಗಿ ಎಷ್ಟು ಭಿನ್ನವಾಗಿದೆ ಎಂಬುದನ್ನು ಆಲೋಚಿಸಿರಿ. ಸತ್ಯವೇದದ ಅಭಿಪ್ರಾಯವು (ದಾನಿಯೇಲನಿಗೆ ಸೂಚಿತವಾಗಿರುವ) ನಮಗೆ ನೀಡುತ್ತದೆ.